

ಲೀವ್ ವಿತ್ ಹಿಮ್. ಹೀ ಈಸ್ ಸಿಕ್. ಹೀ ಈಸ್ ಅ ಮಾನ್ಸ್ಟರ್. ಐ ಹೇಟ್ ಹಿಮ್. ಟೇಕ್ ಮಿ ಅವೇ ಫ್ರಾಮ್ ಹಿಮ್ ಗುಪ್ತಾ' ಎಂದು ಗಳಗಳನೆ ಅತ್ತಿದ್ದು ಅದೇ ಮೊದಲು ಅದೇ ಕೊನೆ. ಅಳುತ್ತಿರುವುದಕ್ಕೆ ಕಾರಣವನ್ನು ರುಕ್ಮಿಣಿ ಮೇಡಮ್ ಹೇಳಲಿಲ್ಲ. ಟೇಕ್ಮಿ ಅವೇ ಫ್ರಾಮ್ ಹಿಮ್ ಎಂದು ತನ್ನ ಬಳಿ ಆಡಿದ ಮಾತಿಗೇನರ್ಥ ಎಂದು ಕೇಳಲಿಕ್ಕಾಗಿ ರುಕ್ಮಿಣಿಯ ನಂಬರ್ ಒತ್ತಿದರೂ ಡಯಲ್ ಆಗುವ ಮುಂಚೆಯೇ ಕಾಲ್ ಕಟ್ ಮಾಡಿಬಿಡುತ್ತಿದ್ದ ಗುಪ್ತಾ.

ಇದಾದ ಕೆಲವು ದಿನಗಳ ನಂತರ ಯಾವುದೋ ಒಂದು ಫೈಲ್ ನೆಪ ತೆಗೆದು ಗುಪ್ತಾ ವಿಕ್ರಂ ಮನೆಗೆ ಬಂದಿದ್ದ. ವಿಕ್ರಂ ಎಂದಿನಂತೆಯೇ ಗುಪ್ತಾನನ್ನು ಪಕ್ಕಕ್ಕೇ ಕುಳ್ಳಿರಿಸಿಕೊಂಡು ಮಾತಿಗಿಳಿದ. ಅಂದು ಅಡುಗೆಯವನ ಬದಲು ರುಕ್ಮಿಣೀಯೇ ಖುದ್ದು ಕಾಫಿ ಹಿಡಿದು ಬಂದಿದ್ದಳು. ಜೀವನದಲ್ಲೇನೋ ಆಗಬಾರದ್ದಾಗಿದೆ ಎಂದು ಕಲ್ಪನೆಯನ್ನೂ ಮಾಡಲು ಸಾಧ್ಯವಿಲ್ಲ ಎನ್ನುವಷ್ಟು ಸಹಜವಾಗಿದ್ದಳು.

'ಥ್ಯಾಂಕ್ಯೂ ಮೈ ಲವ್' ಎನ್ನುತ್ತಾ ವಿಕ್ರಂ ಕಾಫಿ ಕಪ್ ಎತ್ತಿದ್ದು ನೋಡಿ ಅಂದಿನ ರುಕ್ಮಿಣಿ ಮೇಡಂ ಮಾತಿಗೆ ಮತ್ತೆ ಅರ್ಥ ಹುಡುಕುವುದರಲ್ಲಿ ಅರ್ಥವಿಲ್ಲವೆಂದು ಸುಂಕವಿಲ್ಲದ ದಾರಿಯಲ್ಲಿ ವಾಪಸ್ಸಾಗಿದ್ದ ಗುಪ್ತಾ.

'ಆದರೆ ರುಕ್ಮಿಣಿ ಮೇಡಮ್ ಸರ್ ಮೇಲೆ ಯಾಕೆ ಹಗೆ ಸಾಧಿಸುತ್ತಿದ್ದಿರಬಹುದು? ಇಲ್ಲದಿದ್ದರೆ ತನ್ನ ಗಂಡ ವೆಂಟಿಲೇಟರ್‌ನಲ್ಲಿದ್ದಾನೆ ಎಂದು ತಿಳಿದೂ ಯಾವ ಹೆಂಡತಿ ಮೀಟಿಂಗ್‌ನಲ್ಲಿರಲು ಸಾಧ್ಯ!' ಎಂದುಕೊಂಡ ಗುಪ್ತಾಗೆ ಶ್ರೀಮಂತರ ನಡವಳಿಕೆ ಯಾವಾಗಲೂ ವಿಚಿತ್ರ, ಅಸಂಬದ್ಧ ಎಂಬುದು ಅನುಭವಕ್ಕೆ ಬಂದಿತ್ತು.

★★★

ದಾರಿಯಲ್ಲಿ ಹೋಗುವ ಮಾರಿ ಎದುರು ಬಂದು ಕೂತಂತೆ ಪೂರ್ಣಿಮಾಳನ್ನು ಸಹಿಸುವುದು ಅಸಹ್ಯವೆನಿಸಿದರೂ ತೀರಾ ದ್ವೇಷಿಸಲು ಮುಖ ಹಿಡಿದಂತಾಗಿ ಸುಮ್ಮನೆ ಕೂತಿದ್ದಳು ರುಕ್ಮಿಣಿ. ಅಚಾನಕ್ಕಾಗಿ ಮುಖಾಮುಖಿಯಾದರೂ ಸ್ವಲ್ಪ ಹೊತ್ತು ಕುಳಿತುಕೊಳ್ಳೋಣ ಎಂದು ಆಹ್ವಾನ ಕೊಟ್ಟವಳು ಪೂರ್ಣಿಮಾಳೇ ಅಲ್ಲವೇ, ಅವಳೇ ಮೊದಲು ಮಾತನಾಡಲಿ ಎಂದು ಕಾಯುತ್ತಿದ್ದಳು. ಮಾತನಾಡಲಿ ಎನ್ನುವುದೇನು, ಕ್ಷಮೆ ಕೇಳಬೇಕು. ಪ್ರೀತಿಸಿ ಮದುವೆಯಾದ ತನ್ನ ಗಂಡನನ್ನೇ ಸಾವಿನ ಕೂಪಕ್ಕೆ ತಳ್ಳಿ ಬಂದವಳು! ತನ್ನ ಸಂಸಾರವನ್ನಷ್ಟೇ ಅಲ್ಲ... ನನ್ನ ಸಂಸಾರವನ್ನೂ ಬಲಿ ತೆಗೆದುಕೊಂಡಳು. ಅತಿಯಾಗಿ ಪ್ರೀತಿಸುತ್ತಿದ್ದ ವಿಕ್ರಂ, ವಿರಾಜನ ಸಾವಿನ ಕಾರಣ ತಿಳಿದು ನನ್ನನ್ನೂ ಸಂಶಯಿಸಿ ಸಿಗರೇಟಿನ ದೊಂದಿಯಲ್ಲಿ ಚುಚ್ಚಿ ದೇಹದ ಮೇಲಷ್ಟೇ ಅಲ್ಲ, ಮನಸ್ಸಿನ ಮೇಲೂ ಗಾಯ ಮಾಡಿದ. ಇಂತಹ ವಾತಾವರಣದಲ್ಲಿ ಬೆಳೆಯುವುದು ಬೇಡವೆಂದೇ ಇದ್ದೊಬ್ಬ ಮಗಳನ್ನೂ ರೆಸಿಡೆನ್ಷಿಯಲ್ ಸ್ಕೂಲಿಗೆ ಹಾಕಬೇಕಾಯ್ತು. ನಮ್ಮ ಕುಟುಂಬಕ್ಕೇ ಮುಳುವಾದಳು... ಎಂದು ಕಾವಲಿಯಲ್ಲಿದ್ದ ಭತ್ತ ಪುಟಿದು ಹುದಲಾಗುವ ಮೊದಲೇ ಕತ್ತುಹೋದಂತೆ ಸಂಸಾರದ ಗೋಳಿಗೆ ಈಗಾಗಲೇ ಸಾಕಷ್ಟು ಬೆಂದು ಕುಳಿತಲ್ಲೇ ಚಡಪಡಿಸುತ್ತಿದ್ದಳು ರುಕ್ಮಿಣಿ.

'ರುಕ್ಕು, ಹೇಗೆ ಕೇಳಬೇಕು ಗೊತ್ತಾಗ್ತಾ ಇಲ್ಲಾ... ಅರ್ಜೆಂಟ್ ಆಗಿ ಒಂದಿಷ್ಟು ಹಣದ ಅವಶ್ಯಕತೆಯಿದೆ ನನಗೆ. ಇಲ್ಲೇ ಒಂದಿಬ್ಬರು ಫೈನಾನ್ಸಿಯರ್ ಬಳಿ ಈಗ ತಾನೆ ಮಾತನಾಡಿದೆ. ಕುದುರಲಿಲ್ಲ. ನೀನು ಕಂಡಿದ್ದು ಒಳ್ಳೆಯದಾಯ್ತು' ಎಂದು ಮಾತಿಗಿಳಿದಳು ಪೂರ್ಣಿಮಾ.

ಹೇಗಿದ್ದೀಯಾ ಎನ್ನುವ ಒಂದು ಸೌಜನ್ಯದ ಮಾತೂ ಇಲ್ಲದೆ, ಹೀಗೆ ಕಂಡಕೂಡಲೇ ದುಡ್ಡು ಕೇಳುವುದಾ?! ವಿಕ್ರಂ ವೆಂಟಿಲೇಟರ್‌ನಲ್ಲಿ ಇದ್ದಾನೆ ಎಂದು ಫೋನ್ ಬಂದಿದ್ದನ್ನೂ ಕಡೆಗಣಿಸಿ ನಾನಿಲ್ಲಿ ಕುಳಿತಿದ್ದು ಇದನ್ನು ಕೇಳಲಿಕ್ಕಾಗಿಯಾ ಎಂದುಕೊಂಡು ಅಷ್ಟೇ ಬಿಗಿಯಾಗಿ ರುಕ್ಮಿಣಿ ಚೆಕ್‌ಬುಕ್ ಕೈಗೆತ್ತಿಕೊಂಡಳು.